ಪ್ರತಿಕ್ರಿಯೆ ಹೀಗಿದೆ–

'ಓದಿದೆ! ಓದಿದೆ! ಮತ್ತೂ ಓದಿದೆ. ನನ್ನ ತಾಟಸ್ಥ್ಯಕ್ಕೆ ವಿದ್ಯುತ್ ತಗುಲಿದಂತಾಯಿತು. ಕಾದಂಬರಿಯ ಸ್ವಾರಸ್ಯವೂ, ಭಾವ ಪ್ರಬಂಧದ ಆತ್ಮೀಯತೆಯೂ ಹೊಸೆದುಕೊಂಡು ಪ್ರವಾಸ ಕಥನ ಪ್ರವಹಿಸುತ್ತಿತ್ತು– ಕುತೂಹಲದ ಆಶ್ಚರ್ಯದ ಪರಿಹಾಸ್ಯದ ವ್ಯಂಗ್ಯದ ಭರ್ತ್ಸನೆಯ ತರಂಗಗಳೆಲ್ಲಿ! ಯಾವುದೂ ಬರಿಯ 'ವಿಷಯ'ದ ಮಟ್ಟದಲ್ಲಿ ನಿಲ್ಲದೆ ಭಾವಾಂಚಿತವಾಗಿ 'ವಕ್ರತೆ'ಯನ್ನು ಪಡೆದ 'ವಸ್ತು'ವಾಗುತ್ತಿತ್ತು. ಊರಾಗಲಿ, ವ್ಯಕ್ತಿಯಾಗಲಿ, ದೃಶ್ಯವಾಗಲಿ, ಪ್ರಭುಶಂಕರರ ವ್ಯಕ್ತಿತ್ವದ ರಸಮೂಸೆಯಲ್ಲಿ ಸಂಸ್ಕಾರಗೊಂಡು ಸಂಗ ದೂರವಾಗಿ ಶಮ ಪ್ರಚುರವಾಗಿಯೂ ದೂರ ಸಂಗವಾಗದೆ ದಳ ದಳ ಅರಳಿ ಆತ್ಮೀಯವಾಗುತ್ತಿತ್ತು.

ಪ್ರಭುಶಂಕರ ಅವರನ್ನು ಹತ್ತಿರದಿಂದ ಬಲ್ಲವರಿಗೆ ಅವರ ಜೋಕ್ಸ್ ಎಂತಹ ಜೀವನ ದರ್ಶನ ಮಾಡಿಸುತ್ತವೆ ಎನ್ನುವುದು ತಿಳಿದದ್ದೇ ಆಗಿದೆ. ಗಂಭೀರವಾಗಿ, ನಿಧಾನಗತಿಯಲ್ಲಿ ಮಾತನಾಡುತ್ತಲೇ ನಮ್ಮನ್ನು ಚಿಂತನೆಗೆ ಹಚ್ಚುವ ಒಂದು ಮಾತು ಅವರ ಬಾಯಿಂದ ಸಿಡಿಯುತ್ತದೆ. ಅವುಗಳನ್ನು ಎಲ್ಲಿಯೋ ಕೇಳಿದಂತೆ ಅನಿಸಿದರೂ ಹೊಸರೂಪ, ಹೊಸಧಾಟಿಯಲ್ಲಿ ಪ್ರಭುಶಂಕರರದ್ದೇ ಆಗಿರುತ್ತದೆ.

'ಪಟ್ಟಕ್ಕೆ ಬಂದ ಕೆಲವೇ ತಿಂಗಳಲ್ಲಿ ಮರಿಸ್ವಾಮಿಗಳು ತೀರಿಕೊಂಡುಬಿಟ್ಟರು. ಯಮದೂತರು ಅವರನ್ನು ನರಕಕ್ಕೆ ಎಳೆದೊಯ್ದರು. ಮರಿಸ್ವಾಮಿಗಳು ಯಾಕಯ್ಯ ತಂದಿರಿ? ನಾನು ಸ್ವಾಮಿ ಕಣಯ್ಯ, ಬಿಡಿರಯ್ಯ' ಎಂದರು. ಅದಕ್ಕೆ ಭಟರು ಹೇಳಿದರು, 'ಹುಷ್, ಜೋರಾಗಿ ಒದರಾಡಬೇಡಿರಿ, ಪಕ್ಕದ ಕೋಣೆಯಲ್ಲಿ ನಿಮ್ಮ ಹಿರಿಯ ಸ್ವಾಮಿಗಳು ನಿದ್ದೆ ಮಾಡುತ್ತಿದ್ದಾರೆ!' (ಪ್ರಭು ಜೋಕ್ಸ್)

ಧರ್ಮಗುರುಗಳೆನಿಸಿಕೊಂಡವರ ಪಾಡೇ ಹೀಗೆ ಇನ್ನು ಅವರಿಂದ ಅನುಗ್ರಹ ಪಡೆದವರ ಪಾಡು ಎಂತದೊ? ಪ್ರಭುಶಂಕರ್ ಅವರ ಜೋಕ್ಸ್‌ಗಳ ಮಾದರಿ ಇದು.

ಮೈಸೂರಿನ ಕುವೆಂಪು ನಗರದಲ್ಲಿ ಕಾದಂಬರಿಕಾರ ಎಸ್.ಎಲ್. ಭೈರಪ್ಪ ಮತ್ತು ಪ್ರಭುಶಂಕರ ಅವರದು ಅಕ್ಕಪಕ್ಕದ ಮನೆಗಳು. ಯಾರೋ ಒಬ್ಬರು, 'ಏನ್ ಸರ್ ಒಂದು ಕಡೆ ದೊಡ್ಡ ಸೃಜನಶೀಲ ಸಾಹಿತಿಗಳು, ಪಕ್ಕದಲ್ಲಿ ಬಹುದೊಡ್ಡ ವಿದ್ವಾಂಸರು' ಎಂದರಂತೆ. ಅದಕ್ಕೆ ಪ್ರಭುಶಂಕರ, 'ಹೆದರ್ಕೋಬೇಡಿ, ನಮ್ಮ ಮನೆಯ ಸುತ್ತ ಕಾಂಪೌಂಡ್ ಹಾಕಿಕೊಂಡಿದ್ದೇವೆ. ಜೊತೆಗೆ ಗೇಟ್‌ಗೆ ಬೀಗ ಸಹ ಹಾಕಿರುತ್ತೇವೆ. ಇದರಿಂದ ನಮ್ಮಿಂದ ನಿಮಗೂ ಅಪಾಯವಿಲ್ಲ. ಹಾಗೆಯೇ ನಿಮ್ಮಿಂದ ನಮಗೂ ಅಪಾಯವಾಗಬಾರದಲ್ಲ' ಎಂದರಂತೆ!

ನಾನು ಒಮ್ಮೆ ರಸ್ತೆಯಲ್ಲಿ ಹೋಗುತ್ತಿದ್ದಾಗ ಪ್ರಭುಶಂಕರ ಸಿಕ್ಕಿದ್ದರು. 'ಎಲ್ಲಿಗೆ ಹೋಗ್ತಾ ಇದ್ದೀಯಪ್ಪಾ,' ಎಂದರು. ನಾನು, 'ಒಂದು ಭಾಷಣ ಮಾಡಲು ಹೋಗ್ತಾ ಇದ್ದೀನಿ ಸರ್' ಎಂದೆ. ನನ್ನ ಮುಖವನ್ನೇ ದಿಟ್ಟಿಸಿ ನೋಡುತ್ತಾ ಅವರು, 'ಹಾಗಾದರೆ ನೀನು ಇನ್ನೂ ಸಮಾಜವನ್ನು ಹಾಳು ಮಾಡುವ ಪಾಪದ ಕೆಲಸಗಳನ್ನು ಬಿಟ್ಟಿಲ್ವೇ,' ಎಂದರು. ಅದನ್ನೇ ಚಿಂತಿಸುತ್ತಾ ಮೌನವಾಗಿ ಮುಂದಕ್ಕೆ ನಡೆದೆ.

ಹಾಸ್ಯ ಸಾಹಿತಿ ಅ.ರಾ. ಮಿತ್ರ ಅವರು ಪ್ರಭುಶಂಕರ ಅವರ ಆಪ್ತವಲಯದ ಶಿಷ್ಯರು. ಶ್ರೀಯುತರು ಕೋಲಾರದಲ್ಲಿ ಅಧ್ಯಾಪಕರಾಗಿದ್ದಾಗ, ಹಸಿವಿನಿಂದ ನರಳುತ್ತಾ ತರಗತಿಯಲ್ಲಿ ಕುಳಿತಿದ್ದ 'ಮಿತ್ರ'ರಿಗೆ ಕ್ಯಾಂಟೀನಿನಲ್ಲಿ ಊಟ ಹಾಕಿಸಿದ ದಿನದಿಂದ ಅವರಿಬ್ಬರ ಸಂಬಂಧ ನಿಡುಬಾಳಿನುದ್ದಕ್ಕೂ ಮುಂದುವರೆಯಿತು. ಅ.ರಾ. ಮಿತ್ರ ಮೈಸೂರಿಗೆ ಬಂದಾಗಲೆಲ್ಲಾ